# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **364** |
| ಸದಸ್ಯರ ಹೆಸರು | : | ಶ್ರೀ ಕೆ. ಹರೀಶ್ ಕುಮಾರ್<br>(ವಿಧಾನ ಸಭೆಯಿಂದ ಚುನಾಯಿತರು) |
| ಉತ್ತರಿಸಬೇಕಾದ ದಿನಾಂಕ | : | 23-09-2020 |
| ಉತ್ತರಿಸುವ ಸಚಿವರು | : | ಮಾನ್ಯ ಕಂದಾಯ ಸಚಿವರು |

| ಪ್ರಶ್ನೆ | ಉತ್ತರ |
|---|---|
| (ಅ) ದಕ್ಷಿಣ ಕನ್ನಡ ಜಿಲ್ಲೆ ಬೆಳ್ತಂಗಡಿ ತಾಲೂಕಿನಲ್ಲಿ ಸಂಪೂರ್ಣವಾಗಿ ಹಾನಿಗೊಳಗಾದ ಎಷ್ಟು ಮನೆಗಳಿಗೆ 5 ಲಕ್ಷ ರೂ. ನಂತೆ ಪರಿಹಾರ ಮಂಜೂರಾಗಿದೆ ಬಿಡುಗಡೆಯಾದ ಅನುದಾನ ಎಷ್ಟು ; | ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ಒಟ್ಟು 203 ಸಂಪೂರ್ಣ ಹಾನಿಗೊಳಗಾದ ಮನೆಗಳೆಂದು ಪರಿಗಣಿಸಿ ರಾಜೀವ್ ಗಾಂಧಿ ವಸತಿ ನಿಗಮದ ಪರಿಹಾರ ತಂತ್ರಾಂಶದಲ್ಲಿ ನೋಂದಾಯಿಸಲಾಗಿರುತ್ತದೆ.<br><br>ನೋಂದಾಯಿತ ಪ್ರಕರಣಗಳ ಪೈಕಿ 3 ಅನಧಿಕೃತ ನಿರ್ಮಾಣ ಹೊರತುಪಡಿಸಿ ಇನ್ನುಳಿದ 200 ಮನೆಗಳ ಸಂತ್ರಸ್ತರಿಗೆ ಆರಂಭಿಕ ಹಂತದಲ್ಲಿ ರೂ.1.00 ಲಕ್ಷ ಪರಿಹಾರ ಹಣ ಬಿಡುಗಡೆಗೊಳಿಸಲಾಗಿದೆ.<br><br>ಪೂರ್ಣ ಮನೆಹಾನಿಯಾದ ಸಂತ್ರಸ್ಥರಿಗೆ ರೂ.5.00 ಲಕ್ಷಗಳನ್ನು ಒಂದೇ ಬಾರಿಗೆ ಬಿಡುಗಡೆಗೊಳಿಸದೇ ಆರಂಭಿಕ ಅನುದಾನ ಬಳಸಿಕೊಂಡು ಕಾಮಗಾರಿ ಪ್ರಾರಂಭಿಸಿ ತಳಪಾಯ-ಗೋಡೆ-ಚಾವಣಿ-ಪೂರ್ಣ ಹೀಗೆ ಮನೆ ನಿರ್ಮಾಣದ ಪ್ರಗತಿ ಆಧರಿಸಿ ಜಿಪಿಎಸ್ ದೃಢೀಕರಣಗೊಂಡ ಫಲಾನುಭವಿಗಳಿಗೆ ಹಂತ ಹಂತವಾಗಿ ಪರಿಹಾರ ತಂತ್ರಾಂಶದ ಮೂಲಕ ಪರಿಹಾರ ಮೊತ್ತವನ್ನು ಬಿಡುಗಡೆ ಮಾಡಲಾಗುತ್ತದೆ.<br><br>ಜಿಪಿಎಸ್ ಅಳವಡಿಸಿ ದೃಢೀಕರಣ ನೀಡಿದ ಸಂಪೂರ್ಣ ಮನೆ ಹಾನಿಯ ಪ್ರಕರಣಗಳಿಗೆ ಈವರೆಗೆ ಒಟ್ಟು ರೂ.5.48 ಕೋಟಿ ಪರಿಹಾರ ಮಂಜೂರು ಮಾಡಲಾಗಿರುತ್ತದೆ. ಇವುಗಳ ಪೈಕಿ 5 ಫಲಾನುಭವಿಗಳಿಗೆ ಸಂಪೂರ್ಣ ಮೊತ್ತ ರೂ.5.00 ಲಕ್ಷಗಳು ಬಿಡುಗಡೆಯಾಗಿರುತ್ತವೆ. |

.....2

| | |
|---|---|
| (ಆ) ಮನೆ ಹಾನಿಗೊಳಗಾದ ನಿರ್ವಸತಿಗರಿಗೆ ಪಾವತಿಸಬೇಕಾದ ಮನೆ ಬಾಡಿಗೆ ಬಾಬ್ತು ಎಷ್ಟು; ಹಣ ಪಾವತಿ ಆಗಿದೆಯೇ ಪಾವತಿಯಾದ ಅನುದಾನ ಎಷ್ಟು ? | ಮನೆ ಬಾಡಿಗೆ ಆಯ್ಕೆ ಮಾಡಿಕೊಂಡ ಫಲಾನುಭವಿಗಳಿಗೆ ಗರಿಷ್ಠ 10 ತಿಂಗಳ ಅವಧಿಗೆ ಸೀಮಿತಗೊಳಿಸಿ ಮಾಸಿಕ ರೂ.5000/- ಗಳಂತೆ ಮನೆ ಬಾಡಿಗೆ ಬಾಬ್ತು ನಿಗದಿಪಡಿಸಲಾಗಿದೆ.<br><br>ಸಂಪೂರ್ಣ ಮನೆ ಹಾನಿಯಾದ 91 ಸಂತ್ರಸ್ಥರು ಮತ್ತು ಭಾಗಶಃ ಮನೆ ಹಾನಿಯಾದ 43 ಸಂತ್ರಸ್ಥರು ಸೇರಿದಂತೆ ಒಟ್ಟು 134 ಸಂತ್ರಸ್ಥರಿಗೆ ಒಟ್ಟು ರೂ.64.25 ಲಕ್ಷಗಳನ್ನು ಪರಿಹಾರ ತಂತ್ರಾಂಶದ ಮೂಲಕ ನೇರವಾಗಿ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಬಿಡುಗಡೆ ಮಾಡಲಾಗಿದೆ. |

*ಕಂಇ 426 ಟಿಎನ್‌ಆರ್ 2020*

(ಆರ್. ಅಶೋಕ)
ಕಂದಾಯ ಸಚಿವರು